

ಡಾ.ವಿನೋದ ಛೆಬ್ಬಿ

**ಎಲ್ಲ ಪ್ರಗತಿಪರ ಬೆಳವಣಿಗೆಯ ಮಾರ್ಗಗಳು ಅತಂತ್ರ ಸ್ಥಿತಿಯ ಮೂಲಕವೇ ಹಾಯ್ದು ಹೋಗುತ್ತವೆ!**

# 187: ಸರಿಯಾದ ಸಂದೇಶ-6

ಸಂದೇಶನ ಲೈಂಗಿಕ ದುಸ್ಸಾಹಸವೇ ಅವನು ಬದಲಾಗಲು ಪ್ರೇರೇಪಿಸುತ್ತಿದೆ. ಹೆಂಡತಿಯ ಮುಂದೆ ಹಂಚಿಕೊಳ್ಳುವ ಪ್ರಕ್ರಿಯೆಗೆ ಧೈರ್ಯಮಾಡುತ್ತ, ಅಲ್ಲಿ ತನಗೆ ಬೇಕಾದುದು ಸಿಗುವ ಖಾತರಿ ಇಲ್ಲದಿದ್ದರೆ ಆಕಡೆಗೆ ಹೋಗಿ ಪ್ರಯೋಜನವೇನು ಎಂದು ಪ್ರಶ್ನಿಸಿಕೊಳ್ಳುತ್ತಿದ್ದಾನೆ.

ಸಂದೇಶನ ಸಂದಿಗ್ಧತೆಯು ನಮ್ಮೆಲ್ಲರ ಅಂತರಂಗದಲ್ಲಿ ಆಗಾಗ ನಡೆಯುವ ಉಭಯಸಂಕಟವನ್ನು (Ambivalence) ಸೂಚಿಸುತ್ತದೆ. ಇದು ಹೇಗೆಂದರೆ, ಪ್ರತಿಯೊಬ್ಬರ ಬದುಕಿನಲ್ಲೂ ಆಗಾಗ ನಾನು ಹಿಡಿದ ದಾರಿ ಹೇಗೋ ಏನೋ ಎಂಬ ಸಂದಿಗ್ಧತೆ ಮೂಡುತ್ತದೆಯಷ್ಟೆ? ಉದಾಹರಣೆಗೆ, ಮದುವೆಯಾಗಿ ತವರನ್ನು ಬಿಟ್ಟು ಅತ್ತೆಯ ಮನೆಗೆ ಹೊರಟಿದ್ದೀರಿ, ಅಥವಾ ಹೊಸ ಉದ್ಯೋಗ ಹುಡುಕಿಕೊಂಡು ಹಳ್ಳಿಯಿಂದ ದೊಡ್ಡ ನಗರಕ್ಕೆ, ಪರಿಚಿತ ಭಾಷೆಯ ವಲಯದಿಂದ ಪರಭಾಷೆಯ ವಲಯಕ್ಕೆ, ವಿದೇಶಕ್ಕೆ ಹೊರಟಿದ್ದೀರಿ ಎಂದುಕೊಳ್ಳಿ. ಆಗ ಏನು ಅನ್ನಿಸುತ್ತದೆ? 'ಸುಭದ್ರವಾದ ತಾಣವನ್ನು, ಪರಿಚಿತ ಪರಿಸರವನ್ನು ಬಿಟ್ಟಿದ್ದೇನೆ. ಇದುವರೆಗೂ ಕಂಡಿರದ ತಾಣವನ್ನು ಹುಡುಕಿಕೊಂಡು ಅಪರಿಚಿತ ಪರಿಸರದಲ್ಲಿ ಪ್ರಯಾಣ ಶುರುವಾಗಿದೆ. ಮುಂದೆಷ್ಟು ದೂರವಿದೆ ಎಂಬುದು ಸ್ಪಷ್ಟವಾಗಿಲ್ಲ. ದಾರಿಯಲ್ಲಿ ಏನೇನು ಅಡ್ಡಿ ಆತಂಕಗಳು ಎದುರಾಗುತ್ತವೆಯೋ ಗೊತ್ತಿಲ್ಲ. ನಾನು ಮಾಡುತ್ತಿರುವ ಪ್ರಯತ್ನದ ಫಲಶ್ರುತಿಯ ಮೇಲೆ ನನಗೇ ಹಿಡಿತವಿಲ್ಲ!' ಹೀಗೆ ಸಾಗುವಾಗ ಮನದೊಳಗೆ ಏನೇನು ಗೊಂದಲ ನಡೆಯಬಹುದು? ನೀವು ಕಾಣುವುದು, ಕೇಳುವುದು, ಮಾಡುವುದು... ಪ್ರತಿಯೊಂದೂ ನಿಮಗೆ ಮುಂಚೆ ಗೊತ್ತಿರದ ಸಂಗತಿಯಾಗಿದ್ದು, ಮನಸ್ಸಿಗೆ ಆಪ್ತವಾಗದೆ, ದಿಕ್ಕುಗೆಟ್ಟಂತಾಗುತ್ತದೆ. 'ಇದಾವುದೂ ನನ್ನದಲ್ಲ, ನನಗೆ ಸಂಬಂಧಪಟ್ಟಿಲ್ಲ' ಎನ್ನುವ ಅನಿಸಿಕೆ ಪ್ರಬಲವಾಗಿ, 'ಇದು ನಾನೇ ಅಲ್ಲ!' ಎನ್ನುವ ಮಟ್ಟಿಗೂ ವಿಲಕ್ಷಣವಾದ ಅರ್ಥವಾಗದ ಅನುಭವವನ್ನು ಕೊಡುತ್ತದೆ (ಇದು ಸ್ಪಷ್ಟವಾಗಬೇಕಾದರೆ ಮೂರು ದಿನಗಳಿಂದ ದಿಕ್ಕುತಪ್ಪಿ ಮರುಭೂಮಿಯಲ್ಲಿ ಪ್ರಯಾಣ ಮಾಡುತ್ತಿದ್ದೀರಿ ಎಂದು ಕಲ್ಪಿಸಿಕೊಳ್ಳಿ). ಒಳಗೊಳಗೇ ಭಯ, ಆತಂಕ, ಅನಿಶ್ಚಿತತೆ, ಅಸ್ಪಷ್ಟತೆ. ದಾರಿ ಎಲ್ಲಿ ಹೋಗುತ್ತದೋ ಗೊತ್ತಿಲ್ಲ; ಹಾಗೆಂದು ಹಿಂದಿರುಗುವ ಹಾಗೂ ಇಲ್ಲ! ಬಂದದ್ದನ್ನು ಎದುರಿಸಲೇಬೇಕು ಎನ್ನುವ ಸ್ಥಿತಿಗೆ ಬಂದಿದ್ದೀರಿ. ಹೀಗೆ ನಿಶ್ಚಿತವಾದುದನ್ನು ಬಿಟ್ಟುಕೊಟ್ಟು ಅನಿಶ್ಚಿತತೆಯನ್ನು ಎದುರಿಸುತ್ತ, ಸಿಗಬೇಕಾದುದು ಇನ್ನೂ ಸಿಕ್ಕಿರದೆ ಕಾಯ್ದು ನಿಂತಿರುವ ಕಾಲ್ಪನಿಕ ತಾಣವೇ ಅತಂತ್ರ ತಾಣ (liminal space); ಆಗಿರುವ ಸ್ಥಿತಿಯೇ ಅತಂತ್ರ ಸ್ಥಿತಿ (liminal state). ಮರುಭೂಮಿಯ ನಡುವೆ ಇದ್ದಂತೆ – ಮುಂದೇನೂ ಕಾಣದ, ಆದರೂ ಮುಂದುವರಿಯಲೇಬೇಕಾದ ಸ್ಥಿತಿ!

ಅತಂತ್ರ ತಾಣಗಳು ಬದುಕಿನ ಪ್ರಯಾಣದ ಉದ್ದಕ್ಕೂ ನಿಲ್ದಾಣದಂತಿವೆ. ಇದಕ್ಕೆ ಮಾದರಿ ಎಂದರೆ ಹದಿವಯಸ್ಸು. ಆಗ ಬಾಲ್ಯವನ್ನು ಬಿಟ್ಟು, ಯೌವನವನ್ನು ತಲುಪದೆ ನಡುವೆಯೆಲ್ಲೋ ಕಳೆದು ಹೋಗಿರುತ್ತೇವೆ. ಇನ್ನೊಂದು ದೃಷ್ಟಾಂತ ಉದ್ಯೋಗದ ನಂತರದ ನಿವೃತ್ತಿ. ಸುಖಸೌಕರ್ಯದ ವಲಯವನ್ನು (comfort zone) ಬಿಟ್ಟಿದ್ದೇನೆ, ಮುಂದೇನು ಎಂದು ಅಧೀರತೆ ಕಾಡುತ್ತದೆ. ಶಾಲೆಬಿಟ್ಟು ಕಾಲೇಜಿಗೆ ಹೋದಾಗ, ಕನ್ನಡ ಬಿಟ್ಟು ಇಂಗ್ಲಿಷ್ ಮಾಧ್ಯಮ ಆರಿಸಿಕೊಂಡಾಗ, ಮನೆಬಿಟ್ಟು ಹಾಸ್ಟೆಲ್ ಸೇರಿದಾಗ, ಮಕ್ಕಳು ಬೆಳೆದುನಿಂತು ಮನೆಬಿಟ್ಟು ಹೊರಟಾಗ... ಇವೆಲ್ಲ ತಾಣಗಳಲ್ಲಿ ನಮಗೆ ಕಾಣುವುದು ಅಪರಿಚಿತತೆ, ಅನಿಶ್ಚಿತತೆ, ಹಾಗೂ ಒಂಟಿತನ; ಆದರೂ 'ಮುಂದೆ' ಸಾಗಲೇಬೇಕಾದ ಅನಿವಾರ್ಯತೆ.

ದಾಂಪತ್ಯದಲ್ಲಂತೂ ಅತಂತ್ರ ತಾಣಗಳು ಹೆಜ್ಜೆಹೆಜ್ಜೆಗೂ ಇವೆ. ಹೊಂದಾಣಿಕೆಯಂಥ ಸರಳ ವಿಷಯವನ್ನೇ ತೆಗೆದುಕೊಳ್ಳಿ. 'ನನ್ನದು' ಎನ್ನುವುದನ್ನು ಬಿಟ್ಟುಕೊಟ್ಟು 'ಸಂಗಾತಿಯದನ್ನು' ಅನುಸರಿಸಬೇಕಾಗಿ ಬಂದಾಗ ಎಷ್ಟು ಅತಂತ್ರ ಎನ್ನಿಸುತ್ತದೆ – ತನ್ನ ದೃಷ್ಟಿ ಸರಿಯಾಗಿದ್ದರೂ ಕಣ್ಣು ಕಟ್ಟಿಸಿಕೊಂಡು ಸಂಗಾತಿಯ ಕೈಹಿಡಿದು ನಡೆದಂತೆ! ಅದರಲ್ಲೂ ಲೈಂಗಿಕ ಹೊಂದಾಣಿಕೆಗೆ ಎದುರಿಸುವ ಅನಿಶ್ಚಿತತೆ ಕಡಿಮೆಯೇನಲ್ಲ. ಯಾಕೆ? ವೈಯಕ್ತಿಕ ಲೈಂಗಿಕತೆಯನ್ನು ಕಂಡುಕೊಳ್ಳಲು ನಮ್ಮಲ್ಲಿ ಅವಕಾಶವೇ ಇಲ್ಲವಲ್ಲ? ಎಲ್ಲದಕ್ಕಿಂದ ಹೆಚ್ಚಾಗಿ ಸಂಗಾತಿಯು ಸುಖವನ್ನು ದಾಂಪತ್ಯದ ಹೊರಗೆ ಹುಡುಕಿಕೊಂಡಾಗ (ಇರುವುದೋ ಬಿಡುವುದೋ?), ನಂತರ ಹೊರಗಿನ ಅಪ್ಯಾಯಮಾನ ಸುಖವನ್ನು ದಾಂಪತ್ಯದ ಚೌಕಟ್ಟಿನೊಳಗೆ ಪಡೆಯಬೇಕಾದ ಸ್ಥಿತಿ ಬಂದಾಗ. ಹಾಗಾಗಿ, ಅತಂತ್ರ ಸ್ಥಿತಿಗೆ ಸಂದೇಶನು ದಿಕ್ಕುಗಾಣದಂತೆ ವರ್ತಿಸುವುದು ಸಹಜವೆ!

ಆದರೆ ಅತಂತ್ರತೆಯ ಆಯ್ಕೆಯಲ್ಲಿ ಹಲವು ಪ್ರಯೋಜನಗಳಿವೆ. ಅತಂತ್ರತೆ ಎಂದರೆ ಕೂಡುರಸ್ತೆಗಳ ವೃತ್ತವಿದ್ದಂತೆ. ಎಲ್ಲ ವಿಕಾಸದ, ಬೆಳವಣಿಗೆಯ ಮಾರ್ಗಗಳು ಅತಂತ್ರತೆಯ ತಾಣದ ಮೂಲಕವೇ ಹಾಯ್ದು ಹೋಗುತ್ತವೆ. ಒಂದೊಂದು ಮಾರ್ಗಕ್ಕೂ ನಾನಾ ಕವಲು ದಾರಿಗಳಿವೆ. ಪ್ರತಿಯೊಂದು ಕವಲಿಗೂ ಅದರದೇ ಸಾಧ್ಯತೆಗಳಿದ್ದು, ಪ್ರತಿ ಸಾಧ್ಯತೆಯಲ್ಲೂ ಬದುಕಿನ ಹೊಚ್ಚಹೊಸ ಅನುಭವಗಳು ನಮ್ಮದಾಗಲು ಅವಕಾಶಗಳಿವೆ. ಇಂಥ ಅವಕಾಶಗಳೇ ದಾಂಪತ್ಯದಲ್ಲಿ ಹಳತನ್ನು ತೊಲಗಿಸಿ ಹೊಸದನ್ನು ತರುತ್ತವೆ. ಅದಕ್ಕಾಗಿ ಮೊದಲು ಸುಖವಲಯದಿಂದ ಹೊರಬಂದು ಅತಂತ್ರ ತಾಣದ ಮೂಲಕ ಹಾಯ್ದುಹೋಗಲು ಧೈರ್ಯ ಮಾಡಲೇಬೇಕು. ಚಿಕ್ಕದಾಗಿ ಹೇಳಬೇಕೆಂದರೆ ಅತಂತ್ರ ತಾಣದ ಆಚೆಗೆ ಬೆಳವಣಿಗೆ ಇದೆ, ಆದರೆ ಭದ್ರತೆಯಿಲ್ಲ; ಹಾಗೂ ಅದರ ಈಚೆಗೆ ಭದ್ರತೆಯಿದೆ, ಆದರೆ ಬೆಳವಣಿಗೆ ಇಲ್ಲ! ವಿಚಿತ್ರವೇನೆಂದರೆ, ಪ್ರೇಮಪ್ರಣಯಗಳು ಭದ್ರತೆಯಲ್ಲಿ ಇಲ್ಲದೆ ಅತಂತ್ರ ತಾಣದ ಆಚೆಗಿವೆ – ಅದಕ್ಕೆಂದೇ ದಾಂಪತ್ಯದ ಹೊರಗಿನ ಸುಖಕ್ಕಾಗಿ ಹಾತೊರೆಯುವುದು!

ಅತಂತ್ರ ಸ್ಥಿತಿಗೆ ಬಂದಾಗ ಎಲ್ಲರಿಗೂ ಕಾಡುವ ಪ್ರಶ್ನೆಯನ್ನೇ ಸಂದೇಶ ಕೇಳಿದ: 'ಸರಿ, ಈ ದಾರಿ ಅನುಸರಿಸಿದರೆ ಮುಂಚೆಗಿಂತ ಹೆಚ್ಚು ಸುಖ ಸಿಗುತ್ತದೆಯೆ? ನಮ್ಮ ಸಂಬಂಧ ಮುಂಚೆಗಿಂತ ಹೆಚ್ಚು ಚೆನ್ನಾಗಿರುತ್ತದೆಯೆ?'

ಬಾಂಧವ್ಯದ ಬಗೆಗೆ ದಂಪತಿಗಳು ಕೇಳುವ ಪ್ರಶ್ನೆಗಳು ಒಂದು ವಿಧದಲ್ಲಿ ಯಕ್ಷಪ್ರಶ್ನೆಗಳಿಗಿಂತ ಕಠಿಣ ಎಂದು ದಾಂಪತ್ಯ ಚಿಕಿತ್ಸಕನಾದ ನನಗೆ ಅನ್ನಿಸುತ್ತದೆ. ಯಾಕೆ? ಒಬ್ಬೊಬ್ಬರ ಪ್ರಶ್ನೆಗಳು ಅವರವರ ಪರಿಕಲ್ಪನೆಗಳಿಗೆ (concept) ತಕ್ಕಂತೆ ಇರುತ್ತವೆ. ಹಾಗಾಗಿ ಅವುಗಳಿಗೆ ಉತ್ತರಿಸುವುದರ ಬದಲು ಅವರ ಪರಿಕಲ್ಪನೆಗಳನ್ನು ಒಡೆದುಹಾಕುವುದೇ (deconstruction) ಸುಲಭ ಎನ್ನಿಸುತ್ತದೆ. ಹಾಗಾಗಿ ಸಂದೇಶನ ಪ್ರಶ್ನೆಯನ್ನೇ ಪ್ರಶ್ನಿಸಿದೆ: 'ಸಂದೇಶ್, ಸುಖ ಎಂದಿರಿ. ನಿಮಗೆ ಸಿಕ್ಕಿರುವುದು ಸುಖವೇ ಎಂದು ಹೇಗೆ ಗೊತ್ತು? ಅದಕ್ಕಿಂತ ಹೆಚ್ಚಿನ ಸುಖ ಎಂದರೇನು?' ಅವನು ತಬ್ಬಿಬ್ಬಾದ.

'ನಿಮ್ಮನ್ನೇ ನೋಡಿ: ಪಾರ್ಲರ್ ಸುಖವೇ ದಾಂಪತ್ಯಕ್ಕಿಂತ ಹೆಚ್ಚು ಎನ್ನುತ್ತಿದ್ದವರು, ಈಗ ಅದೇನೂ ಸುಖವಲ್ಲ ಎಂದು ಬಿಟ್ಟುಕೊಟ್ಟು ದಾಂಪತ್ಯದಲ್ಲೇ ಸುಖ ಹುಡುಕಲು ಹೊರಟಿದ್ದೀರಿ... ಎಷ್ಟೋ ಸಲ ಯಾವುದು ಸುಖ ಕೊಡುತ್ತದೆ ಎನ್ನುವುದೇ ನಮಗೆ ಗೊತ್ತಿರುವುದಿಲ್ಲ. ಮಕ್ಕಳಂತೆ ಇದೇ ಆಟಿಕೆ ಬೇಕು ಎಂದು ಹಟ ಮಾಡುತ್ತೇವೆ. ಸಿಕ್ಕಾಗ ಸ್ವಲ್ಪಹೊತ್ತು ಆಟವಾಡಿ ನಂತರ ಆಸಕ್ತಿ ಕಳೆದುಕೊಂಡು ಕೈಬಿಡುತ್ತೇವೆ! ನಮಗೇನು ಬೇಕು ಎನ್ನುವುದು ಯಾವೊತ್ತೂ ಅರ್ಥವಾಗುವುದಿಲ್ಲ.' ಅವನಿಗೆ ಅರ್ಥವಾಯಿತು.

'ಮುಂದೆ ಸಿಕ್ಕಿದ್ದು ಮುಂಚೆಗಿಂತ ಹೆಚ್ಚು ಅಥವಾ ಕಡಿಮೆ ಎಂದಿರುವುದಿಲ್ಲ. ಮುಂಚೆಗಿಂತ ಭಿನ್ನವಾಗಿರುತ್ತದೆ, ಹಾಗೂ ಭಿನ್ನವಾದುದರಲ್ಲಿ ಹೆಚ್ಚು ಕಡಿಮೆ ಎಂದಿಲ್ಲದೆ ಹೊಸತನ ಇರುತ್ತದೆ. ಆ ಹೊಸತನಕ್ಕೆ ನೀವಿಬ್ಬರೂ ಹೊಂದಿಕೊಳ್ಳುವಾಗ ಸಿಗುವುದು ಅದ್ಭುತವಾಗಿರುತ್ತದೆ. ನಿಮ್ಮ ಯತ್ನಕ್ಕೆ ನಿಮ್ಮಾಕೆ ಸೊಪ್ಪು ಹಾಕದಿದ್ದರೆ ಇನ್ನೊಂದು ಅತಂತ್ರ ತಾಣಕ್ಕೆ ಹೋಗುತ್ತೀರಿ. ಅಲ್ಲಿಂದ ಇನ್ನೊಂದು ಕವಲುದಾರಿ. ಆ ದಿಕ್ಕಿನಲ್ಲಿ ಮತ್ತಷ್ಟು ಪ್ರಯತ್ನ... ನೀವು ಹೀಗೆ ಯತ್ನಿಸುವಾಗ ನಿಮ್ಮಾಕೆಯೂ ಅನಿಶ್ಚಿತ ಮಾರ್ಗ ಹಿಡಿಯುತ್ತ ತನ್ನ ಸುಖದ ಹುಡುಕಾಟ ತಾನು ನಡೆಸುತ್ತಾರೆ.' ಎಂದು ವಿವರಿಸಿದೆ. ಈಗ ಅವನ ಮುಖದ ಮೇಲೆ ನಿರಾಳತೆ ಮೂಡಿತು. ಅಂತೂ ಸರಿಯಾದ ಸಂದೇಶ!

ಉಚಿತ ಸಹಾಯವಾಣಿಗೆ ಕರೆಮಾಡಿ: 8494944888